NOVEMBER 18, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಡಿಸೆಂಬರ್ 8 ರಿಂದ, ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ, ಚಳಿಗಾಲದ ಅಧಿವೇಶನ; ಪತ್ರಿಕೋದ್ಯಮದ 50 ವಿದ್ಯಾರ್ಥಿಗಳಿಗೆ, ಕಲಾಪ ವೀಕ್ಷಿಸಲು ಅವಕಾಶ.
- ವಿಧಾನಮಂಡಲ ಚಳಿಗಾಲದ ಅಧಿವೇಶನ; ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಒತ್ತು ನೀಡಲು, ವಿಪಕ್ಷಗಳ ಸಿದ್ಧತೆ.
- ಬೆಂಗಳೂರು ಟೆಕ್ ಶೃಂಗ ಸಭೆಗೆ ಇಂದು ಚಾಲನೆ; ಕೃತಕ ಬುದ್ಧಿಮತ್ತೆ ಸಂಚಾಲಿತ, ಪರ್ಸನಲ್ ಕಂಪ್ಯೂಟರ್ ಬಿಡುಗಡೆ.
- ರಾಜ್ಯದ ಉತ್ತರ ಒಳನಾಡಿನಲ್ಲಿ, ಮುಂದಿನ ನಾಲ್ಕೈದು ದಿನ, ಶೀತ ಗಾಳಿ; ಮುಂಜಾಗ್ರತೆ ವಹಿಸಲು ಮನವಿ.
- ಇಂದು ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ.

<><><>

ಈಗ ವಾರ್ತೆಗಳ ವಿವರ

<><><>

ಬೆಳಗಾವಿಯ, ಸುವರ್ಣ ವಿಧಾನಸೌಧದಲ್ಲಿ, ಬರುವ ಡಿಸೆಂಬರ್ 8 ರಿಂದ ಆಯೋಜಿತ, ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ, ಪತ್ರಿಕೋದ್ಯಮದ ಐವತ್ತು ವಿದ್ಯಾರ್ಥಿಗಳಿಗೆ, ಸದನ ಕಲಾಪ ವೀಕ್ಷಿಸಲು, ಅನುಕೂಲ ಕಲ್ಪಿಸಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ ತಿಳಿಸಿದ್ದಾರೆ. ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಹಿನ್ನೆಲೆ, ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ, ಪತ್ರಕರ್ತರೊಂದಿಗೆ, ಅವರು ಸಂವಾದ ನಡೆಸಿದರು.

<><><>

ಬರುವ, ಡಿಸೆಂಬರ್ 8 ರಿಂದ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸಮಾವೇಶಗೊಳ್ಳಲಿರುವ, ವಿಧಾನ ಮಂಡಲ, ಚಳಿಗಾಲದ ಅಧಿವೇಶನದ ಹಿನ್ನೆಲೆ, ಬಿ.ಜೆ.ಪಿ ಹಾಗೂ ಜೆ.ಡಿ.ಎಸ್. ಪಕ್ಷಗಳ ಸಮನ್ವಯ ಸಭೆಯಲ್ಲಿ, ಅಧಿವೇಶನದಲ್ಲಿ ಚರ್ಚಿಸಬೇಕಿರುವ ವಿಷಯಗಳ ಕುರಿತು, ನಿರ್ಧರಿಸಲಾಗುವುದು ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ

ಮಾತನಾಡಿದ ಅವರು, ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ ಸಮಸ್ಯೆಗಳು, ಮಳೆಯಿಂದಾದ ಹಾನಿಗೆ ಹಾಗೂ ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರ ಕಲ್ಪಿಸುವುದು ಸೇರಿದಂತೆ, ಕಬ್ಬು ಬೆಳೆಗಾರರಿಗೆ ನ್ಯಾಯ ಒದಗಿಸಲು, ಅಧಿವೇಶನದಲ್ಲಿ ಸಮಗ್ರ ಚರ್ಚೆ ನಡೆಸಲು, ಬಯಸುವುದಾಗಿ ಅವರು ಹೇಳಿದರು.

<><><>

ಹವಾಮಾನ ಬದಲಾವಣೆ ಸವಾಲಿನ ಮಧ್ಯೆ, ಪ್ರಕೃತಿಯೊಂದಿಗೆ ಸಾಮರಸ್ಯ ಸಾಧಿಸುವುದು, ಮನುಷ್ಯರಿಗೆ ಅನಿವಾರ್ಯ ಎಂದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಶಿಕ್ಷಣ ಸಚಿವಾಲಯದ, ಹಿಂದಿ ನಿರ್ದೇಶನಾಲಯ, ರಾಜ್ಯ ಹಿಂದಿ ಪ್ರಾಧ್ಯಾಪಕರ ಸಂಘದ ಆಶ್ರಯದಲ್ಲಿ, ಬೆಂಗಳೂರಿನ, ಸೇಂಟ್ ಪೌಲ್ಸ್ ಕಾಲೇಜು, ಭಾ ಾ ವಿಭಾಗ ಆಯೋಜಿಸಿದ್ದ, "ಪ್ರಸ್ತುತ ದೃಷ್ಟಿಕೋನದಲ್ಲಿ, ಭಾರತೀಯ ಜ್ಞಾನ ಸಂಪ್ರದಾಯದ ಮಹತ್ವ" ವಿ ಯದ ಕುರಿತ, ಎರಡು ದಿನಗಳ, ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಭಾರತವನ್ನು, ಸಂಪ್ರದಾಯದ ಭೂಮಿ ಮತ್ತು ನಾವಿನ್ಯತೆ ಮೇಳೈಸಿದ, ತಂತ್ರಜ್ಞಾನದ ಶಕ್ತಿ ಕೇಂದ್ರವೆಂದು, ವಿಶ್ವ ಗುರುತಿಸಿದೆ. ಭಾರತೀಯ ಜ್ಞಾನ ಸಂಪ್ರದಾಯ, ಸಂಯಮ, ಸಮತೋಲನ ಮತ್ತು ಸಹಬಾಳ್ವೆಯ ಮಾರ್ಗವನ್ನು ತೋರಿಸುತ್ತದೆ ಎಂದರು.

<><><>

ಕಲಬುರಗಿ ಜಿಲ್ಲೆಯಲ್ಲಿ, ಶೀತ ಗಾಳಿಯ ಪ್ರಖರತೆ ಗರಿಷ್ಟ ಮಟ್ಟದಲ್ಲಿದ್ದು, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು; ವಯೋ ವೃದ್ಧರು ಹಾಗೂ ಮಕ್ಕಳ ಬಗ್ಗೆ, ಪಾಲಕರು ಕಾಳಜಿ ವಹಿಸುವಂತೆ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

ಈ ಮಧ್ಯೆ, ರಾಜ್ಯದ ಉತ್ತರ ಒಳನಾಡಿನಲ್ಲಿ ಮುಂಬರುವ ನಾಲ್ಕೈದು ದಿನ, ಶೀತಗಾಳಿ ಬೀಸುವ ಸಾಧ್ಯತೆಯಿದೆ ಎಂದು, ಭಾರತೀಯ ಹವಾಮಾನ ಇಲಾಖೆಯ, ಬೆಂಗಳೂರು ಕೇಂದ್ರದ ನಿರ್ದೇಶಕ, ಸಿ.ಎಸ್. ಪಾಟೀಲ ತಿಳಿಸಿದ್ದಾರೆ.

<><><>

ಸಿ.ಎಸ್. ಪಾಟೀಲ ಧ್ವನಿ – 68 ಸೆಕೆಂದುಗಳು

<><><>

ತಂತ್ರಜ್ಞಾನ ಶೃಂಗಸಭೆ; ಟೆಕ್ ಸಮಿಟ್–2025 ಕ್ಕೆ, ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ, ಇಂದು ಚಾಲನೆ ದೊರೆಯಲಿದೆ ಎಂದು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ದಿನಗಳ ಕಾಲ ಆಯೋಜಿತ, ಶೃಂಗ ಸಭೆಯಲ್ಲಿ, 60 ದೇಶಗಳ ಪ್ರತಿನಿಧಿಗಳು, 10 ಸಾವಿರಕ್ಕೂ ಹೆಚ್ಚು ಯುವ ಅನ್ವೇ ಕರು ಪಾಲ್ಗೊಳ್ಳಲಿದ್ದಾರೆ ಎಂದರು. ಕೃತಕ ಬುದ್ಧಿಮತ್ತೆ ಸಂಚಾಲಿತ, ಪರ್ಸನಲ್ ಕಂಪ್ಯೂಟರ್ ಬಿಡುಗಡೆ ಯಾಗಲಿದ್ದು, ವಿದ್ಯಾರ್ಥಿಗಳಿಗೆ ಕೈಗೆಟಕುವ ದರದಲ್ಲಿ ವಿತರಿಸಲಾಗುವುದು ಎಂದು, ಸಚಿವ ಖರ್ಗೆ ನುಡಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರೀಯ ಭದ್ರತೆಯ, ಹಿತದೃಷ್ಟಿಯಿಂದ, ಸ್ಮಾರ್ಟ್ ಟೆಕ್ ಪರಿಹಾರಗಳನ್ನು ಅಭಿವೃದ್ಧಿಪಡಿಸಲು, ಗತಿ ಶಕ್ತಿ ವಿಶ್ವವಿದ್ಯಾಲಯ ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಮಧ್ಯೆ, ಮಹತ್ವದ ಒಡಂಬಡಿಕೆಯಾಗಿದೆ ಎಂದು, ಡಿ.ಆರ್.ಡಿ.ಒ ಕಾರ್ಯದರ್ಶಿ ಸಮೀರ ಕಾಮತ, ತಿಳಿಸಿದ್ದಾರೆ. ಲಾಜಿಸ್ಟಿಕ್ಸ್, ಚಿಪ್ ವಿನ್ಯಾಸ ಹಾಗೂ ಸುಧಾರಿತ ಎನ್‌ಕ್ರಿಪ್ಶನ್ ತಂತ್ರಜ್ಞಾನಗಳ ಸಂಶೋಧನೆಗೆ, ಈ ಒಪ್ಪಂದ ಸಹಕಾರಿಯಾಗಲಿದ್ದು, ರಕ್ಷಣಾ ವ್ಯವಸ್ಥೆಗಳ ತಾಂತ್ರಿಕ ಅಭಿವೃದ್ಧಿಯನ್ನು ಸುಗಮಗೊಳಿಸುತ್ತದೆ ಎಂದು ನಿರೀಕ್ಷಿಸಿದ್ದಾಗಿ, ಅವರು ಹೇಳಿದರು.

<><><>

'ದೇಹದ ತೂಕವನ್ನು ಸಹಜವಾಗಿ, ಪ್ರಕೃತಿ ಚಿಕಿತ್ಸೆಯ ಮೂಲಕ ಇಳಿಸಿ' ಎಂಬ ಘೋಷ ವಾಕ್ಯದೊಂದಿಗೆ, ಇಂದು ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನವನ್ನು, ಆಚರಿಸಲಾಗುತ್ತಿದೆ. ಕಳೆದ, 2018 ರಿಂದ ಪ್ರತಿ ವರ್ಷ, ನವೆಂಬರ್ 18 ಅನ್ನು, ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ.

<><><>

ಕಲ್ಯಾಣ ಕರ್ನಾಟಕದ, ರಾಯಚೂರು, ಯಾದಗಿರಿ, ಬಳ್ಳಾರಿ, ಕೊಪ್ಪಳ, ಕಲಬುರಗಿ ಹಾಗೂ ಬೀದರ ಜಿಲ್ಲೆಗಳ ಜನತೆಯ, ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಹಾಗೂ ಸಕಾಲಿಕ ಆರೈಕೆಯ ಅಗತ್ಯ ಪೂರೈಸಲು, ರಾಯಚೂರಿನಲ್ಲಿ ಏಮ್ಸ ಸ್ಥಾಪನೆ ಯೋಗ್ಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ, ಹೇಳಿದ್ದಾರೆ. ಹೊಸ ದಿಲ್ಲಿಯಲ್ಲಿ ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ, ರಾಯಚೂರಿನಲ್ಲಿ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – ಏಮ್ಸ್ ಸ್ಥಾಪಿಸಲು, ಮನವಿ ಪತ್ರ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ.

<><><>

ಕಲಬುರಗಿಯ, ಸೇಂಟ್ ಜಾನ್ಸ್ ಆಸ್ಪತ್ರೆ ಸಭಾಂಗಣದಲ್ಲಿ, ಇಂದು ಬೆಳಿಗ್ಗೆ 10 ಗಂಟೆಗೆ, ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮದಡಿ, 'ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನ' ಆಯೋಜಿಸಲಾಗಿದೆ. ಕಲಬುರಗಿ ಜಂಟಿ ನಿರ್ದೇಶಕರ ಕಚೇರಿಯ, ವಿಭಾಗೀಯ ಸಹ ನಿರ್ದೇಶಕ, ಶಂಕ್ರಪ್ಪ ಮೈಲಾರಿ ಚಾಲನೆ ನೀಡಲಿದ್ದಾರೆ.

<><><>

'ಅಂಗಾಂಗ ದಾನ ಹಾಗೂ ನಶಾ ಮುಕ್ತ ಭಾರತ ಅಭಿಯಾನ' ಕಾರ್ಯಕ್ರಮ, ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಭಾಂಗಣದಲ್ಲಿ, ಜರುಗಿತು. ಕಾರ್ಮಿಕ ಖಾತೆ ಸಚಿವ, ಸಂತೋಷ ಲಾಡ ಅಭಿಯಾನಕ್ಕೆ ಚಾಲನೆ ನೀಡಿದರು. ಅಂಗಾಂಗ ದಾನ ಹಾಗೂ ವ್ಯಸನ ಮುಕ್ತಿ ಕುರಿತು, ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ವಿದ್ಯಾರ್ಥಿಗಳಿಗೆ, ಸಚಿವರು ಪ್ರತಿಜ್ಞಾ ವಿಧಿ ಬೋಧಿಸಿದರು.

<><><>

ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕು, ಇಂಡುವಳ್ಳಿ ಸಮೀಪದ ಹುನವಳ್ಳಿಯಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ 'ಹುಲಿ ಕಣಿವೆಗೆ ಬನ್ನಿ', ಪರಿಸರ ಜಾಗೃತಿ ಕಾರ್ಯಕ್ರಮ ಆಯೋಜಿತವಾಗಿದೆ. 'ದಂಡಾವತಿ ನದಿ ಮೂಲ ಸಂರಕ್ಷಣೆಗೆ ಸಂಕಲ್ಪ ಮಾಡೋಣ, ಬೆಟ್ಟ ದೇವರಕಾಡು ಉಳಿಸಲು ಜಂಟಿ ಪ್ರಯತ್ನ ಮಾಡೋಣ' ಎಂಬ ಧ್ಯೇಯದೊಂದಿಗೆ, ಅರಣ್ಯ ಇಲಾಖೆ, ಜೀವ ವೈವಿಧ್ಯ ಮಂಡಳಿ

ಹಾಗೂ ವೃಕ್ಷ ಲಕ್ಷ ಆಂದೋಲನ, ಈ ಕಾರ್ಯಕ್ರಮ ಸಂಘಟಿಸಿವೆ. ಪರಿಸರ ಜಾಗೃತಿ ಟ್ರಸ್ಟ್ ಉಪಾಧ್ಯಕ್ಷ, ಸಾಗರದ ಶ್ರೀಪಾದ ಬಿಚ್ಚುಗತ್ತಿ ಈ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಶ್ರೀಪಾದ ಬಿಚ್ಚುಗತ್ತಿ 32  ಸೆಕೆಂದುಗಳು

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಡಿಸೆಂಬರ್ 8 ರಿಂದ, ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ, ಚಳಿಗಾಲದ ಅಧಿವೇಶನ; ಪತ್ರಿಕೋದ್ಯಮದ 50 ವಿದ್ಯಾರ್ಥಿಗಳಿಗೆ, ಕಲಾಪ ವೀಕ್ಷಿಸಲು ಅವಕಾಶ.
- ವಿಧಾನಮಂಡಲ ಚಳಿಗಾಲದ ಅಧಿವೇಶನ; ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಒತ್ತು ನೀಡಲು, ವಿಪಕ್ಷಗಳ ಸಿದ್ಧತೆ.
- ಬೆಂಗಳೂರು ಟೆಕ್ ಶೃಂಗ ಸಭೆಗೆ ಇಂದು ಚಾಲನೆ; ಕೃತಕ ಬುದ್ಧಿಮತ್ತೆ ಸಂಚಾಲಿತ, ಪರ್ಸನಲ್ ಕಂಪ್ಯೂಟರ್ ಬಿಡುಗಡೆ.
- ರಾಜ್ಯದ ಉತ್ತರ ಒಳನಾಡಿನಲ್ಲಿ, ಮುಂದಿನ ನಾಲ್ಕೈದು ದಿನ, ಶೀತ ಗಾಳಿ; ಮುಂಜಾಗ್ರತೆ ವಹಿಸಲು ಮನವಿ.
- ಇಂದು ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>